# ಗಾಂಧಿನಗರ ಪೋಸ್ಟ್

## ತನಿಖೆ ಮತ್ತು ಪ್ರೇಮಕಥೆ



ಇದು ಕ್ರೈಂ ಥ್ರಿಲ್ಲರ್! ಇದು 'ತ್ರಾಟಕ' ಸಿನಿಮಾದ ಬಗ್ಗೆ ಚಿತ್ರತಂಡದ ಬಣ್ಣನೆ. ಶೀರ್ಷಿಕೆ ವಿಚಿತ್ರವಾಗಿದೆಯಲ್ಲ ಎಂದರೆ, ಸಿನಿಮಾ ಕೂಡ ವಿಭಿನ್ನವಾಗಿ ಎನ್ನುತ್ತದೆ ಚಿತ್ರತಂಡ. ತ್ರಾಟಕ ಎಂದರೆ ಯೋಗ ವಿದ್ಯೆಯಲ್ಲಿ ಏಕಾಗ್ರತೆಯನ್ನು ಸಾಧಿಸುವ ಒಂದು ವಿಧಾನ. ಬೇಕಿದ್ದರೆ ಇದನ್ನು ಧ್ಯಾನ ಎಂದೂ ಕರೆಯಬಹುದು. ಈ ಅಂಶ ಕಥೆಯಲ್ಲೂ ಇರುವುದರಿಂದ ಚಿತ್ರವನ್ನು 'ತ್ರಾಟಕ' ಎಂದು ಕರೆಯಲಾಗಿದೆ.

ಶಿವಗಣೇಶ್ ಚಿತ್ರದ ನಿರ್ದೇಶಕರು. ಈ ಮುನ್ನ 'ಜಿಗರ್‌ಥಂಡ' ಎನ್ನುವ ಕಾಮಿಡಿ ಥ್ರಿಲ್ಲರ್ ನಿರ್ದೇಶಿಸಿದ್ದ ಅವರು ಈ ಬಾರಿ ಕ್ರೈಂ ಥ್ರಿಲ್ಲರ್ ಮೊರೆ ಹೋಗಿದ್ದಾರೆ. ರಾಹುಲ್ ಐನಾಪುರ ಚಿತ್ರದ ನಾಯಕ. ಚಿತ್ರದ ನಿರ್ಮಾಣದ ಜವಾಬ್ದಾರಿಯೂ ಅವರದೇ. ಎಂಜಿನಿಯರಿಂಗ್ ಕಲಿತಿರುವ ಅವರು, ಕುಟುಂಬದ ರಾಜಕೀಯ ಹಿನ್ನೆಲೆಯನ್ನೂ ಬದಿಗಿಟ್ಟು ಸಿನಿಮಾ ಹಚ್ಚಿಕೊಂಡಿದ್ದಾರೆ. ಚಿತ್ರದಲ್ಲಿ ಅವರದು ಪೊಲೀಸ್ ಅಧಿಕಾರಿಯ ಪಾತ್ರ. ವಿಚಾರಣೆ, ತನಿಖೆಯಷ್ಟೇ ಚಿತ್ರದಲ್ಲಿಲ್ಲ; ಪ್ರೇಮದ ನವಿರುತನವೂ ಇದೆಯಂತೆ.

ರಾಹುಲ್‌ಗೆ ಜೋಡಿಯಾಗಿ ಹೃದಯಾ ನಟಿಸಿದ್ದಾರೆ. 'ಒರಟ ಐ ಲವ್ ಯು' ಚಿತ್ರದಲ್ಲಿ ನಟಿಸಿದ್ದ ಹೃದಯಾ ಹೆಚ್ಚೂಕಡಿಮೆ ಹತ್ತು ವರ್ಷಗಳ ನಂತರ ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಒಳ್ಳೆಯ ಸಿನಿಮಾದ ಮೂಲಕ ಚಿತ್ರರಂಗದಲ್ಲಿ ಮತ್ತೆ ಕಾಣಿಸಿಕೊಳ್ಳಲು ಹಂಬಲಿಸುತ್ತಿದ್ದ ಅವರಿಗೆ ಚಿತ್ರದಲ್ಲಿನ ಮನೋವೈದ್ಯೆಯ ಪಾತ್ರ ಖುಷಿ ಕೊಟ್ಟಿದೆ.

ವಿನೋದ್ ಭಾರತಿ ಛಾಯಾಗ್ರಹಣ ಹಾಗೂ ಅರುಣ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ಭವಾನಿ ಪ್ರಕಾಶ್, ಯಶ್ವಂತ್ ಶೆಟ್ಟಿ, ಶ್ರೀಧರ್ ಶಾಸ್ತ್ರಿ ಹಾಗೂ ದಿಶಾ ಪೂವಯ್ಯ ತಾರಾಗಣದಲ್ಲಿರುವ ಪ್ರಮುಖರು. ಆ. 31ರಂದು ಚಿತ್ರ ತೆರೆ ಕಾಣುತ್ತಿದೆ.



## ಹುಷಾರ್... ಹುಷಾರ್...

ಬ್ಯಾಂಕ್‌ಗೆ ನುಗ್ಗಿದ ದುಷ್ಕರ್ಮಿಗಳನ್ನು ಸೇನಾ ಅಧಿಕಾರಿ ಮಟ್ಟ ಹಾಕುವ ಕಥೆ ಸುನೀಲ್‌ಕುಮಾರ್ ದೇಸಾಯಿ ನಿರ್ದೇಶನದ 'ನಿಷ್ಕರ್ಷ' ಚಿತ್ರದ್ದು. ಇದೇ ಶೀರ್ಷಿಕೆ ಇದೀಗ ಸಿ.ಎಂ. ವಿಜಯ್ ನಿರ್ದೇಶನದಲ್ಲಿ ಹೊಸ ಕಥೆಯೊಂದಿಗೆ ಸಿನಿಮಾ ಆಗಿದೆ.

ವಿಷ್ಣುವರ್ಧನ್ ನಾಯಕರಾಗಿ ನಟಿಸಿದ್ದ 'ನಿಷ್ಕರ್ಷ' ಹಣದಾಸೆಗೆ ಬಿದ್ದ ದುಷ್ಕರ್ಮಿಗಳು ಜೀವ ಕಳೆದುಕೊಳ್ಳುವ ಕಥೆ ಒಳಗೊಂಡಿತ್ತು. ಹೊಸ ಚಿತ್ರದಲ್ಲಿ 'ಹೆಣ್ಣನ್ನು ಮುಟ್ಟಿದ್ರೆ ಹುಷಾರ್' ಎನ್ನುವ ಎಚ್ಚರಿಕೆ ನೀಡುತ್ತಿದ್ದಾರೆ ವಿಜಯ್. 'ಚಿತ್ರಕಥೆ ಡಿಫರೆಂಟಾಗಿದೆ. ಕ್ಲೈಮ್ಯಾಕ್ಸ್ ವಿಭಿನ್ನವಾಗಿದೆ' ಎನ್ನುವುದರ ಮೂಲಕ ತಮ್ಮ ಚಿತ್ರದ ಕುರಿತು ಅವರು ಕುತೂಹಲ ಹುಟ್ಟಿಸುತ್ತಾರೆ. 2016ರಲ್ಲಿ ಬೆಂಗಳೂರಿನಲ್ಲಿ ನಡೆದ ಘಟನೆಯೊಂದನ್ನು ಆಧರಿಸಿ ಅವರು ಚಿತ್ರಕಥೆ ರಚಿಸಿದ್ದಾರೆ.

ಮೈಸೂರು ಹಾಗೂ ರಾಜಸ್ಥಾನಗಳಲ್ಲಿ ಚಿತ್ರೀಕರಣ ನಡೆಸುವ ಉದ್ದೇಶ ನಿರ್ದೇಶಕರದು. ಹೊಸ 'ನಿಷ್ಕರ್ಷ'ದಲ್ಲಿ ಹಾಡುಗಳೂ ಇವೆ. ವಿದೇಶದಲ್ಲಿ ಗೀತೆಗಳನ್ನು ಚಿತ್ರೀಕರಿಸುವ ಉದ್ದೇಶ ಚಿತ್ರತಂಡದ್ದು.

ಅನಿಕೇತನ್ ಹಾಗೂ ದಿವ್ಯಾ ಚಿತ್ರದ ನಾಯಕ–ನಾಯಕಿ. ಸಾಹಸ ಕಲೆಗಳಲ್ಲಿ ತರಬೇತಿ ಪಡೆದಿರುವ ಅನಿಕೇತನ್ ಚಿತ್ರಕ್ಕೆ ಹೇಳಿ ಮಾಡಿಸಿದಂತಿದ್ದಾರೆ ಎನ್ನುವ ವಿಶ್ವಾಸ ನಿರ್ದೇಶಕರದು. ಅನಂತನಾಗ್, ಸುಹಾಸಿನಿ ತಾರಾಗಣದಲ್ಲಿರುವ ಅನುಭವಿಗಳು. ಇವರ ಜೊತೆಗೆ ಸಾಯಿಕುಮಾರ್ ಹಾಗೂ ರವಿಶಂಕರ್ ಸಹೋದರರ ಸವಾಲ್ ಕೂಡ ಚಿತ್ರದಲ್ಲಿ ಇರಲಿದೆ. ಶರವಣನ್ ಛಾಯಾಗ್ರಹಣ ಹಾಗೂ ವಿವೇಕ್ ಚಕ್ರವರ್ತಿ ಸಂಗೀತ ಚಿತ್ರಕ್ಕಿದೆ.